ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ವನ್ಯ ಮೃಗ ರಕ್ಷಣೆಯ ಬಗ್ಗೆ

೪೪೬ (೧೫೧೨)ಶ್ರೀ ಕೆ. ಲಕ್ಷ್ಮಪ್ಪ(ಕುಣಿಗಲ್).—ಪಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ವನ್ಯಮೃಗ ರಕ್ಷಣೆಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮಗಳೇನು ?

ಆ) ಕೇಂದ್ರ ಸರ್ಕಾರ ಧನ ಸಹಾಯ ಕೊಟ್ಟಿದ್ದಾರೆಯೇ ?

ಇ) ಈ ಬಗ್ಗೆ ಖರ್ಚಾಗಿರುವ ಹಣವೆಷ್ಟು ? ಪ್ರಯೋಜನವಾದ ಪ್ರಮಾಣವೇನು ?

ಶ್ರೀ ಬಿ.ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ವನ್ಯ ಪ್ರಾಣಿಗಳ, ಪಕ್ಷಿಗಳ ಸಾಂದ್ರತೆಯುಳ್ಳ ಪ್ರದೇಶಗಳನ್ನು ೧೯ ಅಭಯಾರಣ್ಯಗಳನ್ನಾಗಿಯೂ ಹಾಗೂ ೫ ರಾಷ್ಟ್ರೀಯ ಉದ್ಯಾನವನಗಳಾಗಿಯೂ ಘೋಷಿಸಲಾಗಿದೆ. ವನ್ಯ ಪ್ರಾಣಿ ಸಂರಕ್ಷಣೆ ಕಾಯ್ದೆ ಮತ್ತು ಅಧಿನಿಯಮ ೨೩ ರನ್ನು ಜಾರಿಗೆ ತರಲಾಗಿದೆ. ಈ ಅಭಯಾರಣ್ಯಗಳಲ್ಲಿ ರಾಷ್ಟ್ರೀಯ ಉದ್ಯಾನವನಗಳಲ್ಲಿ ಯಾವ ವಿಧವಾದ ಕಾಡು ಕಡಿಯುವ ಕೆಲಸಗಳನ್ನು ಮತ್ತು ಕಾಡು ಪ್ರಾಣಿಗಳನ್ನು ಬೇಟೆಯಾಡುವುದನ್ನು ನಿಷೇದಿಸಲಾಗಿದೆ. ಪ್ರಾಣಿಗಳ ಕಳ್ಳ ಬೇಟೆಯನ್ನು ನಿಯಂತ್ರಿಸಲು ಬೇಟೆಗಾರರನ್ನು ಎದುರಿಸಲು ಬಂದೂಕುಗಳನ್ನು ಮದ್ದುಗುಂಡುಗಳನ್ನು ನಿಸ್ತಂತು ಉಪಕರಣಗಳನ್ನು ವೇಗವಾಗಿ ಓಡುವ ಜೀಪುಗಳನ್ನು ವನ್ಯ ಪ್ರಾಣಿ ವಿಭಾಗದ ಅಧಿಕಾರಿಗಳಿಗೆ ಒದಗಿಸಲಾಗಿದೆ.

ಆ) ಹೌದು.

ಇ) ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸಹಾಯದಿಂದ ಮಾಡಿದ ಖರ್ಚಿನ ವಿವರ ಕೆಳಗಿನಂತಿದೆ; —

೧೯೮೭–೮೮	ರೂ.	೮೯.೨೨೫	ಲಕ್ಷ ರೂ.ಗಳು
೧೯೮೮–೮೯	ರೂ.	೯೧.೦೪	ಲಕ್ಷ ರೂ.ಗಳು
೧೯೮೯–೯೦	ರೂ.	೧೦೯.೪೯	ಲಕ್ಷ ರೂ.ಗಳು

ವನ್ಯ ಪ್ರಾಣಿಗಳ ಆವಾಸಸ್ಥಾನವನ್ನು ಅಭಿವೃದ್ಧಿಪಡಿಸುವುದು. ಕುಡಿಯಲು ಸಾಕಷ್ಟು ನೀರಿನ ವ್ಯವಸ್ಥೆ ಇವುಗಳಿಂದ ವನ್ಯ ಮೃಗಗಳು ನಿರಾತಂಕವಾಗಿ ತಮ್ಮ ಸಂತತಿಯನ್ನು ಅಭಿವೃದ್ಧಿಗೊಳಿಸಲು ಅವಕಾಶ ಮಾಡಿಕೊಡಲಾಗಿದೆ. ಹಿಂಗಾಗಿ ಕೆಲವು ಮುಖ್ಯ ವನ್ಯ ಪ್ರಾಣಿಗಳ ಸಂಖ್ಯೆಯು ಹೆಚ್ಚಿವೆ.

ಪಶ್ಚಿಮ ಘಟ್ಟಗಳ ಅಭಿವೃದ್ಧಿ

೪೪೮(೧೫೩೫) ಶ್ರೀ ಎನ್. ಜಿ. ನಾಯ್ಕ (ಹೊಳಕಾಲ್ಮೂರು) —ಪಾನ್ಯ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್, ಪಾರ್ವಾ ಮತ್ತು ಪ್ರವಾಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಆ) ಈ ಕಾರ್ಯಕ್ರಮಕ್ಕಾಗಿ ೧೯೮೦–೯೧ ರಲ್ಲಿ ಎಷ್ಟು ಹಣವನ್ನು ನಿಗದಿಗೊಳಿಸಲಾಗಿತ್ತು?

ಇ) ಈ ಸಾಲಿನಲ್ಲಿ ಎಷ್ಟು ಹಣ ನಿಗದಿಗೊಳಿಸಲಾಗಿದೆ?

ಈ) ಈ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ?